**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ರಾಣೇಬೆನ್ನೂರು.</u>**

**<u>ಎಮ್ ವಿ ಸಿ ನಂಬರಃ 2191/2023</u>**

ಆರ್ ಡಬ್ಲ್ಯೂ – 1

| | | |
|---|---|---|
| **ಸಾಕ್ಷಿದಾರರ ಹೆಸರು** | : | ಡಾ ಸಂತೋಷ |
| **ತಂದೆ/ಗಂಡನ ಹೆಸರು** | : | ಬ್ರಹ್ಮಾಚಾರ್ |
| **ವಯಸ್ಸು** | : | 33 ವರ್ಷ |
| **ಉದ್ಯೊಗ** | : | ಅಸಿಸ್ಟಂಟ್ ಪ್ರೋಪೆಸರ್ ತುರ್ತು ಚಿಕಿತ್ಸಾ ವಿಭಾಗ ಸುಬ್ಬಯ್ಯ ಇನ್ಸಿಟ್ಯೂಟ್ ಆಪ್ ಮೆಡಿಕಲ್ ಆಸ್ಪತ್ರೆ ಶಿವಮೊಗ್ಗ |
| **ವಾಸ** | : | ಶಿವಮೊಗ್ಗ |

**<u>ದಿನಾಂಕಃ 26–02–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಹೆಚ್ ವಿ ಎಸ್ ವಕೀಲರಿಂದಃ</u>**

ನ್ಯಾಯಾಲಯದ ಸಮನ್ಸ ಮೇರೆಗೆ ನಾನು ಅರ್ಜಿದಾರರಿಗೆ ಸಂಬಂದಪಟ್ಟ ಮೂಲ ಕೇಶ್ ಶೀಟ್ ಮತ್ತು ಎಮ್ ಎಲ್ ಸಿ ಹಾಗೂ 3 ಎಕ್ಸರೆಗಳು ಹಾಜರುಪಡಿಸುತ್ತಿದ್ದೇನೆ. ಸದರಿ ಎಮ್ ಎಲ್ ಸಿ ಯುಳ್ಳ ಕೇಸ್ ಶೀಟನ್ನು ಒಟ್ಟಾಗಿ ನಿ ಆರ್ –1 ಎಂದು, ಎಕ್ಸರೆಗಳನ್ನು ಒಟ್ಟಾಗಿ ನಿ ಆರ್ –2 ಎಂದು ಗುರುತಿಸಲಾಯಿತು. ಪ್ರಸ್ತುತ ಅರ್ಜಿದಾರರಿಗೆ ಆದ ಲಿಗಮೆಂಟ್ ಟೇರ್ ಶ್ತ್ರ ಚಿಕಿತ್ಸೆ ಇಲ್ಲದೇ ಗುಣಮುಖವಾಗುವಂತಹ ಗಾಯವಾಗಿರುತ್ತದೆ ಎಂದರೆ ಶ್ತ್ರ ಚಿಕಿತ್ಸೆ ಬೇಕಾಗಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಒಂದು ವೇಳೆ ರೋಗಿಗೆ ತೀವ್ರ ತರಹದ ಲಿಗಾಮೆಂಟ್ ಟೇರ್ ಆಗಿದ್ದರೇ ಶ್ತ್ರ ಚಿಕಿತ್ಸೆಯ ಅವಶ್ಯಕತೆ ಇದ್ದು ಕಡಿಮೆ ಟೇರ್ ಆಗಿದ್ದರೇ ಶ್ತ್ರ ಚಿಕಿತ್ಸೆ ಬೇಕಾಗುವುದಿಲ್ಲ ಎಂದು ಮುಂದುವರೆದು ನುಡಿದಿರುತ್ತಾರೆ.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಪಿ ಬಿ ಜಿ ವಕೀಲರಿಂದಃ</u>**

ಸಾಕ್ಷಿಯು ನಿ ಆರ್ –1 ನ್ನು ನೋಡಿ ಅರ್ಜಿದಾರರರ ಬಲ ಮೊಣಕಾಲಿನ ಎಕ್ಸರೆ ಮಾಡಿದಾಗ ಅಲ್ಲಿ ಮೂಳೆ ಮುರಿತ ಕಂಡು ಬಂದಿಲ್ಲ. ಬದಲಾಗಿ ಬಾವು ಕಂಡು ಬಂದಿರುತ್ತದೆ ಎಂದು ನುಡಿದಿರುತ್ತಾರೆ ಅಲ್ಲದೇ ಮುಂದುವರೆದು ಎಕ್ಸರೆಯಲ್ಲಿ ಲಿಗಾಮೆಂಟ್ ಟೇರ್ ಆದ ಬಗ್ಗೆ ಮಾಹಿತಿ ಸಿಗುವುದಿಲ್ಲ ಎಂದು ನುಡಿಯುತ್ತಾರೆ. ಎಕ್ಸರೆಯಲ್ಲಿ ಲಿಗಾಮೆಂಟ್ ಟೇರ್ ಕಂಡು ಬಂದಿಲ್ಲದಿದ್ದರೂ ಎಮ್ ಆರ್ ಐ ನಲ್ಲಿ ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ಲಿಗಾಮೆಂಟ್ ಗೆ ತೊಂದರೆ ಬಂದರೆ ಬಾವು ಬರುತ್ತದೆ ಎಂದರೆ ಬರಹುದು ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.